ಆಸೆಯ ವಿಷಯವಾಗಿರುತ್ತಿತ್ತು. ಬೇಸಗೆ, ದಸರೆ ಬಂತೆಂದರೆ ಅತ್ತೆಯ ಮಕ್ಕಳು ದೊಡ್ಡಪ್ಪನ ಮಕ್ಕಳು ನಾನು, ತಮ್ಮ ಅಂತ ನಾವೆಲ್ಲ ಎಂಟು ಮಕ್ಕಳನ್ನು ಕೂಡಿಕೊಳ್ಳುತ್ತಿದ್ದ ಅಲ್ಲಿಯ ಹತ್ತಾರು ಮಕ್ಕಳು ಒಟ್ಟಾರೆ ಮಕ್ಕಳ ಸೈನ್ಯವೇ ಆಗಿಹೋಗಿರುತ್ತಿತ್ತು. ದೊಡ್ಡ ಹುಡುಗಿಯರಾಗಿದ್ದ ಅಕ್ಕಂದಿರು ನಮ್ಮಿಂದ ಆಗದ ಮರ ಹತ್ತಿ ಹಣ್ಣು ಕೀಳುವುದು, ಹೂ ಕೀಳುವುದು ಮಾಡುತ್ತಾ ನಮಗೆ ಮರ ಹತ್ತುವುದನ್ನು ಕಲಿಸಿ ಮರಕೋತಿ ಆಟ ಆಡಿಸುತ್ತಿದ್ದರು. ದೂರದೂರದ ಹೊಲಗಳಿಗೆಲ್ಲ ಬದನೆಕಾಯಿ ಬಜ್ಜಿ ತುಪ್ಪ ಮುದ್ದೆಯ ಬುತ್ತಿ ಹೊತ್ತು ಹೊರಡುತ್ತಿದ್ದೆವು. ಆದರೆ ಅಲ್ಲಿ ಬೊಗಸೆ ಮುಟ್ಟಿ ಕೆಲಸ ಮಾಡುವ ಮಾತು ದೂರವಾಗಿತ್ತು. ಎತ್ತಿನ ಗಾಡಿ ಕೆಳಗೆ ಮನೆ ಮಾಡಿಕೊಂಡು, ಒಯ್ದ ಬುತ್ತಿಯನ್ನು ಅಡುಗೆಗೆ ಪದಾರ್ಥದಂತೆ ಬಳಸಿ ಸುಳ್ಳೆ ಪಳ್ಳೆ ಒಳ್ಳೆಯ ಅಡುಗೆ ಮಾಡಿ ತಿಂದು ಬಂದ ಅನುಭವಗಳಿಗೆ ಈ ಅಕ್ಕಂದಿರೇ ಮಾರ್ಗದರ್ಶಕರು ಮತ್ತು ಸೂತ್ರಧಾರಿಗಳು.

ಇದೇ ಅಕ್ಕಂದಿರು ಒಂದೆರೆಡು ಬೇಸಗೆಗಳನ್ನು ಕಳೆಯುವಷ್ಟರಲ್ಲಿ ಒಬ್ಬೊಬ್ಬರಾಗಿ ಸಿಂಹಾಸನದಂತಹ ಕುರ್ಚಿಯಲ್ಲಿ ಕೂತು ಆರತಿ ಬೆಳಗಿಸಿಕೊಂಡು ದೊಡ್ಡವರಾಗಿಬಿಟ್ಟಿದ್ದರು. ನಿಜಕ್ಕೂ ಅವರ ಸಿಂಹಾಸನಾರೋಹಣವನ್ನು ಕಂಡ ನಮಗೆ ನಾವು ಯಾವಾಗ ದೊಡ್ಡವರಾಗುತ್ತೇವೋ ಎಂದು ಬಾಯಲ್ಲಿ ನೀರೂರಿತ್ತು. ಅದಕ್ಕೆ ಕಾರಣ ಸಿಂಹಾಸನಾರೋಹಣದ ವೈಭವ.

ಮೈನೆರೆತ ಹುಡುಗಿಗೆ ಮನೆಯವರು ಐದು ದಿನ (ಕೆಲವರು ಒಂಬತ್ತು ಇಲ್ಲವೇ ಹದಿನಾರು ದಿನ) ಹೊರಗೆಲ್ಲೂ ಕಳಿಸದೆ ಮನೆಯಲ್ಲಿಟ್ಟುಕೊಂಡು ಆರೈಕೆ ಮಾಡುತ್ತಾರೆ. ತಿನ್ನಲು ತುಪ್ಪ ಅನ್ನ ಮತ್ತು ಉತ್ತುತ್ತಿ, ಒಣಕೊಬ್ಬರಿ, ಜಾಕಾಯಿ, ಅಳೆಕಾಯಿ, ಹಿಪ್ಪಲಿ ಮೋಡಿಕಡ್ಡಿ ಎಲ್ಲವನ್ನು ಸೇರಿಸಿ ಕುಟ್ಟಿ ಮಾಡಿದ ಪುಡಿಯನ್ನು ತಿನ್ನಲು ಕೊಡುತ್ತಾರೆ. ಆರತಿ ಮಾಡುವ ದಿನದ ಹೊತ್ತಿಗೆ ಮೈನೆರೆತ ಹುಡುಗಿ ಪುಟ್ಟ ಹೆಣ್ಣಾಗಿ ತಯಾರಾಗಿಬಿಡುತ್ತಾಳೆ. ಕೊನೆಯ ದಿನ ಅವಳನ್ನು ಮದುಮಗಳಂತೆ ಸಿಂಗರಿಸಿ ಸಂಬಂಧಿಕರು ಪರಿಚಯದ ಹೆಂಗಳೆಯರು ಸೇರಿ ಆರತಿ ಮಾಡುತ್ತಾರೆ. ಈ ಕಾರ್ಯಕ್ರಮಕ್ಕೆ ಗಂಡಸರು ಬರುವುದು ಅತಿ ವಿರಳ. ಮತ್ತೆ ಎಲ್ಲರ ಯಥೇಚ್ಛ ಪ್ರೀತಿ, ಮುಚ್ಚಟೆ, ಆದರ ಬೇರೆ. ಇವೆಲ್ಲ ಆಚರಣೆಗಳ ಹಿಂದಿನ ಕಾರಣ ಆಗ ತಿಳಿದಿಲ್ಲದಿದ್ದರೂ ಎಲ್ಲರಿಂದ ಸಿಗುವ ಮನ್ನಣೆಗಾಗಿ, ಡ್ರೆಸ್ಸು ಸೀರೆ ಇನ್ನು ಏನೇನೋ ಕಣ್ಣು ಕೋರೈಸುವ ಉಡುಗೊರೆಗಳಿಗಾಗಿ... ಆಸೆ ಆಗದೆ ಇರುತ್ತದೆಯೇ? ನಮ್ಮ ದೊಡ್ಡಪ್ಪನ ಮಗಳು ಅಕ್ಕ ದೊಡ್ಡವಳಾದಾಗ ಬೆಂಗಳೂರಿಂದ ಬಂದಿದ್ದ ಅತ್ತೆಯೊಬ್ಬರು ಚಂದದ ಇಷ್ಟಗೂಲ ಫ್ರಿಲ್ ಫ್ರಾಕ್ ತಂದಿದ್ದರು. ಅದು ನನಗೆ ಯಾವ ಪರಿ ಇಷ್ಟ ಆಗಿತ್ತು ಎಂದರೆ ನಾನೂ ದೊಡ್ಡವಳಾದಾಗ ನನಗೂ ಯಾರಾದರೂ ಅಂತದ್ದೇ ಫ್ರಾಕ್ ಅನ್ನು ಉಡುಗೊರೆಯಾಗಿ ತಂದು ಕೊಟ್ಟ ಹಾಗೆ, ಅದನ್ನು ತೊಟ್ಟು ಸೊಕ್ಕಿ ಓಡಾಡಿದ ಹಾಗೆ... ಓಹ್, ಯಾವುದೂ ನಿಜವಾಗಲಿಲ್ಲ ಅದು ಬೇರೆ ಮಾತು. ಆದರೆ ಆ ಕ್ಷಣ ಅದೆಷ್ಟು ನನ್ನನ್ನು ಆಕರ್ಷಿಸಿತ್ತು.

ಈ ದೊಡ್ಡತನದ ಪಟ್ಟ ಸಿಕ್ಕ ಬಳಿಕ ಅಕ್ಕಂದಿರು ಬದಲಾಗಿಬಿಟ್ಟರು ನೋಡಿ – ದಿಗ್ಭ್ರಾಂತಿಯಾಗಿಬಿಟ್ಟಿತು. ಅದಾದ ಬಳಿಕ ಅಕ್ಕಂದಿರು ನಮ್ಮ ಆಟದ ಸದಸ್ಯೆಯರಲ್ಲ. ಅವರೆಲ್ಲ ಅಡುಗೆ ಮನೆಯ ಸಕ್ರಿಯ ಕೆಲಸಗಾರರು; ಮೊದಲಿನ ನಗು ಕಳೆದು ಕೊಂಡ ಗಂಭೀರೆಯರಾದ ನೀರೆಯರು. ನಮ್ಮ ಹುಡುಗಾಟಗಳಿಗೆ ಹಿರಿಯರಂತೆ ಗದರಿಕೊಳ್ಳುವವರು. ಈಗ ಮರವನ್ನು ನಾವೇ ಹತ್ತಬೇಕು, ಹೂವು ಹಣ್ಣು ಹುಣಸೆ ಅಂತ ನಾವೇ ಕಿತ್ತು ನಾವೇ ತಿಂದು ಆಡಬೇಕು. ಯಾವಾಗಲಾದರೂ ಅಂಗೈಗೆ ಅಂಟಿಸಿಕೊಂಡು ನೆಕ್ಕಲು ಕದ್ದು ಮುಚ್ಚಿ ಹುಣಸೆ ಹಿಂಡಿಯನ್ನೋ